ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ

ಶ್ರೀರಂಗಪಟ್ಟಣ

ಸಿಸಿ 8/2020 ಸಿಡಬ್ಲೂ: 4 ಪಿ ಡಬ್ಲೂ:2

| | |
|---|---|
| ಹೆಸರು | ಚಂದ್ರು |
| ತಂದೆಯ ಹೆಸರು | ನರಸಿಂಹಮೂರ್ತಿ |
| ವಯಸ್ಸು | 35 ವರ್ಷ |
| ವೃತ್ತಿ | ಖಾಸಗಿ ನೌಕರಿ |
| ವಾಸ | ಬೆಂಗಳೂರು |

ದಿನಾಂಕಃ 02.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ</u>

1. ಚಾಸಾ 2 ಮತ್ತು 5 ರವರ ಪರಿಚಯವಿಲ್ಲ. ಸಾಕ್ಷಿ ಪಂಚನಾಮೆಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ4 ಎಂದು, ಸಾಕ್ಷಿಯ ಸಹಿಯನ್ನು ನಿಪಿ4(ಎ) ಎಂದು ಗುರುತಿಸಲಾಗಿದೆ. ಮೃತ ಸೋಮು ಮೈಸೂರಿನ spinx ಸಲೂನ್ ಅಲ್ಲಿ ನಾನು ಕೆಲಸ ಮಾಡುತ್ತಿದ್ದು, ನಾನು ಬೆಂಗಳೂರಿನ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಆತನ ಪರಿಚಯವಿತ್ತು. ಸುಮಾರು 5-6 ವರ್ಷಗಳ ಹಿಂದೆ ಸೋಮು ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ ಎಂದು ತಿಳಿದಿದ್ದು, ನಾನು ಘಟನಾ ಸ್ಥಳಕ್ಕೆ ಹೋದಾಗ ಪೊಲೀಸರು ಅಲ್ಲಿಗೆ ಬಂದಿದ್ದು, ಸ್ಥಳೀಕರು ಅಪಘಾತ

ವಿಷಯ ನನಗೆ ತಿಳಿಸಿದ್ದು, ನಾನು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿ ಪೊಲೀಸರು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಪೋಟೋಗಳನ್ನು ತೆಗೆದಿರುತ್ತಾರೆ. ಅಲ್ಲಿ ಯಾವುದೇ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ, ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸೋಮು ಅವರೊಂದಿಗೆ ಕೆಲಸ ಮಾಡುತ್ತಿದ್ದ ಮತ್ತೊಬ್ಬ ಹುಡುಗ ಮರಣ ಹೊಂದಿರುವುದಾಗಿ ನನಗೆ ತಿಳಿದು ಬಂದಿರುತ್ತದೆ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

2. ದಿಃ 26.06.2019 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ 5 ರವರನ್ನು ಪಂಚನಾಮೆಗೆ ಬರಲು ಕೋರಿದ್ದು, ಆ ಪ್ರಕಾರ ನಾವು ಒಪ್ಪಿಕೊಂಡು ಚಾಸಾ 2 ರವರು ತೋರಿಸಿದ ಸ್ಥಳಕ್ಕೆ ಹೋಗಿದ್ದು, ಸದರಿ ಸ್ಥಳದಲ್ಲಿ ಪೊಲೀಸರು ಸ್ಥಳದ ವಿದ್ಯಮಾನಗಳನ್ನು ನಮೂದು ಮಾಡಿ ನಿಪಿ 4 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಅಪಘಾತ ಮಾಡಿದ ಕೆಎ-42-ಎ-2681 ಟಿಪ್ಪರ್ ಲಾರಿ ಮತ್ತು ಕೆಎ-03-ಜೆಯು-3102 ಪಲ್ಸರ್ ದ್ವಿ ಚಕ್ರ ವಾಹನಗಳು ಇತ್ತು ಎಎಂದರೆ ಸರಿಯಲ್ಲ. ಸದರಿ ಕೆಎ-42-ಎ-2681 ಟಿಪ್ಪರ್ ಲಾರಿ ದಕ್ಷಿಣ ಮುಖವಾಗಿ ನಿಂತಿದ್ದು, ಅದನ್ನು ಪರಿಶೀಲಿಸಲಾಗಿ ಟಾಟ ಕಂಪನಿಯ ಲಾರಿಯಾಗಿದ್ದು, ಕ್ಯಾಬಿನ್ ಭಾಗ ಬಿಳಿ ಬಣ್ಣದ್ದಾಗಿರುತ್ತದೆ ಹಾಗೂ ಹಿಂಬದಿಯ ಬಾಡಿ

ಹಳದಿ ಬಣ್ಣದ್ದಾಗಿರುತ್ತದೆ ಹಾಗೂ ಹಳದಿ ನಂಬರ್ ಪ್ಲೇಟ್ ಹೊಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಲಾರಿಯ ಮುಂಭಾಗದಲ್ಲಿ ಕಬ್ಬಿಣದ ಬಂಪರ್ ಬೆಂಡಾಗಿದ್ದು, ಡ್ರೈವರ್ ಕ್ಯಾಬಿನ್ ನ ಎಡಭಾಗ ಚಕ್ರದ ಹಿಂಭಾಗದ ತಗಡುಗಳು ಬೆಂಡಾಗಿರುತ್ತದೆ ಎಂದರೆ ಸರಿಯಲ್ಲ. ಲಾರಿಯ ಮುಂಭಾಗದ ಎರಡು ಚಕ್ರಗಳು ಒಳಭಾಗದಲ್ಲಿ ಹಾಗೂ ಚಾಸಿ ಅಲ್ಲಿ ರಕ್ತ ಕಲೆಗಳು ಅಂಟಿಕೊಂಡಿರುತ್ತದೆ ಎಂದರೆ ಸರಿಯಲ್ಲ. ದ್ವಿ ಚಕ್ರ ವಾಹನ ಸಂಖ್ಯೆ ಕೆಎ-03-ಜೆಯು-3102 ಅನ್ನು ಪರಿಶೀಲಿಸಿದಾಗ ಅದು ಪಲ್ಸರ್ ದ್ವಿ ಚಕ್ರ ವಾಹನವಾಗಿದ್ದು, ಅದು ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿದ್ದು, ಹೆಡ್ ಲೈಟ್ ಮೇಲ್ಭಾಗ ಡ್ಯಾಮೇಜ್ ಆಗಿರುತ್ತದೆ ಎಂದರೆ ಸರಿಯಲ್ಲ. ಹ್ಯಾಂಡಲ್ ನ ಎಡಭಾಗದ ಹಿಡಿಕೆ ಮುರಿದಿದ್ದು, ಪೆಟ್ರೋಲ್ ಟ್ಯಾಂಕ್ ತಗಡಿನ ಕವಚ ಡ್ಯಾಮೇಜ್ ಆಗಿರುತ್ತದೆ ಎಂದೆರ ಸರಿಯಲ್ಲ. Front Spokes ಎಡಭಾಗ ಬೆಂಡಾಗಿರುತ್ತದೆ ಹಾಗೂ ಮುಂಭಾಗದ ಎಡಭಾಗದ ಇಂಡಿಕೇಟರ್ ಹೊಡೆದು ಹೋಗಿರುತ್ತದೆ ಎಂದರೆ ಸರಿಯಲ್ಲ. ಹಿಂಭಾಗದ ಸೀಟಿಗೆ ಅಳವಡಿಸಿರುವ ಭಾಗ, ಹಿಂಭಾಗದ ಮಧ್ಯದ ಇಂಡಿಕೇಟರ್, ಎಡಭಾಗದ ಇಂಡಿಕೇಟರ್, ಫಿಟ್ಟಿಂಗ್ ಸಮೇತ ಪೂರ್ತಿ ಡ್ಯಾಮೇಜ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಹನಗಳನ್ನು ಪೊಲೀಸರು ಮುಂದಿನ ತನಿಖೆಗಾಗಿ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸದರಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 4 ಅನ್ನು ನಮಗೆ ಓದಿ ಹೇಳಿ ನನ್ನ, ಚಾಸಾ 2 ಮತ್ತು 5 ರವರ

ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಬೆಳಗಿನ 6.15 ರಿಂದ 7 ಗಂಟೆಯವರೆಗೂ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರ ಪರಿಚಯವಿದ್ದು ಆರೋಪಿತರಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*